# 'ಶೂದ್ರ ತಪಸ್ವಿ'ಯ ಸಂಬೋಧನೆಗಳು

ಎಂ.ಎಸ್. ಗೀತಾ

ಕನ್ನಡ ಸಹಾಯಕ ಪ್ರಾಧ್ಯಾಪಕರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ತರೀಕೆರೆ, ಚಿಕ್ಕಮಗಳೂರು ಜಿಲ್ಲೆ.

DOI: https://doi.org/10.5281/zenodo.18775351

## ABSTRACT:

ವಿಶ್ವ ಸಾಹಿತ್ಯ ಜಗತ್ತು ಕಂಡ ಅಪರೂಪದ ಪ್ರತಿಭೆ ಕುವೆಂಪು. ಕವಿ, ಲೇಖಕ, ವಿಮರ್ಶಕ, ಮಹಾಕವಿ, ನಾಟಕಕಾರ, ಕಾದಂಬರಿಕಾರ ಹೀಗೆ ಸಾಹಿತ್ಯದ ಎಲ್ಲ ಪ್ರಕಾರಗಳಲ್ಲೂ ಅಸದೃಶ ಕೊಡುಗೆ ನೀಡಿರುವ ಅವರ ಸುಪ್ರಸಿದ್ಧ ನಾಟಕಗಳಲ್ಲಿ 'ಶೂದ್ರತಪಸ್ವಿ'ಯೂ ಒಂದು. ಕನ್ನಡ ಸಾಹಿತ್ಯಲೋಕದಲ್ಲಿ ವಿಶಿಷ್ಟ ಸ್ಥಾನ ಗಳಿಸಿಕೊಂಡಿರುವ ಈ ನಾಟಕ, ಮನುನಿರ್ಮಿತ ವರ್ಣವ್ಯವಸ್ಥೆಯ ಅಮಾನವೀಯತೆಯನ್ನು ಪ್ರಶ್ನಿಸುವ ಮತ್ತು ಅದಕ್ಕೊಂದು ಸೌಹಾರ್ದ ಪರಿಹಾರ ನೀಡುವ ಮೂಲಕ ತಿದ್ದುವ ಒಂದು ಪ್ರಯತ್ನವೂ ಆಗಿದೆ. ರಾಮಾಯಣದ ಉಪಕತೆಗಳಲ್ಲಿ ಒಂದಾದ 'ಶಂಬೂಕನ ವಧೆ'ಯಲ್ಲಿ ಶೂದ್ರನಾದ ಶಂಬೂಕ ತಪಸ್ಸು ಮಾಡುತ್ತಿರುವುದನ್ನು ತಿಳಿದ ಶ್ರೀರಾಮ 'ಲೋಕಕಲ್ಯಾಣ'ಕ್ಕಾಗಿ ಅವನನ್ನು ಕೊಲ್ಲುತ್ತಾನೆ, ದೇವತೆಗಳಿಂದ ಹರಸಲ್ಪಡುತ್ತಾನೆ. ಪ್ರಸ್ತುತ 'ಶೂದ್ರತಪಸ್ವಿ' ನಾಟಕದಲ್ಲಿ ಈ ಘಟನೆಯನ್ನು ವಿಶ್ವಮಾನವ ದೃಷ್ಟಿಯಿಂದ ವಿವೇಚಿಸಲಾಗಿದ್ದು, ಶ್ರೀರಾಮ ಶಂಬೂಕನನ್ನು ಕೊಲ್ಲದೆ ಅವನ ವಿರುದ್ಧ ದೂರು ತಂದ ಬ್ರಾಹ್ಮಣನಲ್ಲಿ ಮನುಷ್ಯತ್ವವನ್ನು ಮೂಡಿಸುವಲ್ಲಿ ಯಶಸ್ವಿಯಾಗುತ್ತಾನೆ. ಇಲ್ಲಿ ತಪೋನಿರತನಾದ ಶಂಬೂಕನ ಸುತ್ತ ಸುತ್ತುವ ಪಾತ್ರಗಳು ಪರಸ್ಪರ ತಮ್ಮನ್ನು ಸಂಬೋಧಿಸಿಕೊಳ್ಳುವ ರೀತಿಯನ್ನು, ಅವುಗಳ ಸ್ವಾರಸ್ಯವನ್ನು ಹಾಗೂ ವೈಶಿಷ್ಟ್ಯವನ್ನು ಅನ್ವೇಷಿಸುವುದೇ ಈ ಲೇಖನದ ಉದ್ದೇಶವಾಗಿದೆ.

## KEYWORDS:

ಕುವೆಂಪು, ಶೂದ್ರ ತಪಸ್ವಿ, ಸಂಬೋಧನೆಗಳು, ವಿಶ್ವಮಾನವತೆ, ಶಂಬೂಕ.

## 'ಶೂದ್ರ ತಪಸ್ವಿ'ಯ ಸಂಬೋಧನೆಗಳು

ವಿಶ್ವ ಸಾಹಿತ್ಯ ಜಗತ್ತು ಕಂಡ ವಿಶಿಷ್ಟ ಸಾಹಿತಿ ಕುವೆಂಪು. ಕವಿ, ಲೇಖಕ, ಮಹಾಕವಿ, ನಾಟಕಕಾರ, ಕಾದಂಬರಿಕಾರ ಹೀಗೆ ಎಲ್ಲವೂ ಆಗಿರುವ ಕುವೆಂಪು ಅವರನ್ನು ಅರ್ಥೈಸಿಕೊಳ್ಳುವುದು ಅಂಧರು ಆನೆಯನ್ನು ಕಂಡಂತೆಯೇ ಸರಿ. ಕುವೆಂಪು 40ರ ಹರೆಯದಲ್ಲಿದ್ದಾಗ, ಅಂದರೆ 1944ರಲ್ಲಿ ರಚಿಸಿದ ಈ ಕೃತಿಯು ಅವರ ಸಾಹಿತ್ಯ ಸೃಷ್ಟಿಯ ಮೂರು ಧಾರೆಗಳಾದ ಪ್ರಕೃತಿಪ್ರಿಯತೆ, ವೈಚಾರಿಕತೆ ಮತ್ತು ಆಧ್ಯಾತ್ಮಿಕತೆ ಇವುಗಳ ಅಪೂರ್ವವಾದ ತ್ರಿವೇಣಿಸಂಗಮವಾಗಿದೆ. ಪ್ರಕೃತಿಯ ರಮ್ಯತೆ–ರೌದ್ರತೆಗಳು, ವೈಚಾರಿಕ ನೆಲೆಗಟ್ಟಿನ ಕ್ಷತ್ರಿಯೋತ್ತಮ ರಾಮ, ಮೌನಧ್ಯಾನದೊಳಿದ್ದೂ ವಿಶ್ವಮಾನವತೆಯ ಸಂದೇಶ ನೀಡುವ ಶೂದ್ರಮುನಿ... ಹೀಗೆ ಈ ನಾಟಕ ಕುವೆಂಪು

ಸಾಹಿತ್ಯದ ಪ್ರಾತಿನಿಧಿಕ ಕೃತಿಯಾಗಿದೆ. ಅವರ ನಾಟಕಗಳಾದ ಶ್ಮಶಾನ ಕುರುಕ್ಷೇತ್ರ, ಜಲಗಾರ, ಬೆರಳ್ಗೆ ಕೊರಳ್ ಇತ್ಯಾದಿಗಳಂತೆಯೇ ದುರ್ಬಲ ಶೋಷಿತವರ್ಗದ ಪರವಾದ ಗಟ್ಟಿಧ್ವನಿ ಇಲ್ಲಿಯೂ ಮುಂಚೂಣಿಯಲ್ಲಿದೆ. ಅಸ್ಪೃಶ್ಯತೆಯಂಥ ಸಾಮಾಜಿಕ ಪಿಡುಗನ್ನು ನಿವಾರಿಸುವಲ್ಲಿ ಈ ನಾಟಕ ಮಹತ್ತರ ಹೆಜ್ಜೆ ಇಟ್ಟಿದೆ.

ಕನ್ನಡದ ಅತ್ಯಂತ ಪ್ರಮುಖ ನಾಟಕಗಳಲ್ಲಿ ಒಂದಾದ 'ಶೂದ್ರ ತಪಸ್ವಿ'ಯು ತನ್ನ ಶೀರ್ಷಿಕೆಯಿಂದಲೇ ಗಮನ ಸೆಳೆದಿದೆ. ಶೂದ್ರ ಮತ್ತು ತಪಸ್ವಿ ಎಂಬುದು ಪರಸ್ಪರ ವಿರುದ್ಧವಾಗಿರುವ ಎರಡು ಪದಗಳ ಸಂಗಮ. ಚತುರ್ವರ್ಣ ವ್ಯವಸ್ಥೆಯಲ್ಲಿ ಅತ್ಯಂತ ತಳಸ್ತರದ ವ್ಯಕ್ತಿಯೊಬ್ಬ ಮೇಲುಸ್ತರದ ಪರಿಧಿಗೆ ಮಾತ್ರ ಸೀಮಿತವಾಗಿದ್ದ ಅನುಭವವೊಂದನ್ನು, ಸಂತೋಷವೊಂದನ್ನು ತನ್ನದಾಗಿಸಿಕೊಳ್ಳಲು ಮುಂದಾದಾಗ ಅವನಿಗೆ ಬಳಸುವ ವಿಶೇಷಣ ಇದು. ನಾಟಕದ ಶೀರ್ಷಿಕೆಯಾಗುವಷ್ಟು ಕೇಂದ್ರಬಿಂದು ಆಗಿದ್ದರೂ, ನಾಟಕದ ಇಡೀ ಕಟ್ಟಡ ಆತನ ಸುತ್ತ ಕಟ್ಟಲ್ಪಟ್ಟಿದ್ದರೂ ಆತ ಮಾತ್ರ ಇಲ್ಲಿ ಮೌನಿ – ಮ್ಯೂಟ್ ಆಗಿದ್ದಾನೆ. ಮೌನವಾಗಿದ್ದುಕೊಂಡೇ ಎಲ್ಲದಕ್ಕೂ ಕಾರಣವಾಗುವ, ಹುತ್ತದೊಳಗಿದ್ದುಕೊಂಡೇ ಎಲ್ಲರ ಚಿತ್ತ ಚಂಚಲ ಮಾಡುವ ಚಮತ್ಕಾರಿಯಾಗಿದ್ದಾನೆ ನಾಟಕಕಾರನ ಕೈಯಲ್ಲಿ. ಈತನ ಸುತ್ತ ಸುತ್ತುವ ರಾಮ, ಬ್ರಾಹ್ಮಣ ಪಾತ್ರಗಳು ಬೇರೆ ಬೇರೆ ಸಂದರ್ಭಗಳಲ್ಲಿ ಬೇರೆ ಬೇರೆ ಹೆಸರುಗಳಿಂದ, ವಿಶೇಷವಾಗಿ ವಿಶೇಷಣಗಳಿಂದ ಸಂಬೋಧಿಸಲ್ಪಡುತ್ತವೆ. ಆ ಸಂದರ್ಭಗಳ ವೈಶಿಷ್ಟ್ಯ ಸ್ವಾರಸ್ಯಗಳನ್ನು ಮಾತ್ರ ಈ ಲೇಖನದಲ್ಲಿ ಮುಖ್ಯವಾಗಿಟ್ಟುಕೊಳ್ಳಲಾಗಿದೆ.

ಮಹಾಕವಿ ವಾಲ್ಮೀಕಿಯ ನಂತರ ರಾಮಾಯಣದೊಳಗೆ ಕೆಲ ಕವಿಗಳ ಅಲ್ಪ ದೃಷ್ಟಿಯಿಂದ ನುಸುಳಿರುವ ಹಲವಾರು ಪ್ರಕ್ಷಿಪ್ತಗಳಲ್ಲಿ ಶಂಬೂಕ ವಧೆಯೂ ಒಂದು. ಉತ್ತರ ಕಾಂಡದಲ್ಲಿ ಬರುವ ಪ್ರಸಂಗವು ವರ್ಣಾಂಧತೆಯ ಒಂದು ನಿದರ್ಶನವಾಗಿದ್ದು ವಾಲ್ಮೀಕಿಯ ಹುತ್ತಗಟ್ಟಿದ ಚಿತ್ತ ಕೆತ್ತಿದ ಪುರುಷೋತ್ತಮನ ರೂಪು ರೇಖೆಗಳನ್ನು ಹಾಳುಗೆಡವಿದೆ. ಸೀತಾ ಪರಿತ್ಯಾಗದ ನಂತರ ವೃದ್ಧ ಬ್ರಾಹ್ಮಣನೊಬ್ಬನು ತನ್ನ ಮಗನ ಮೃತ ದೇಹವನ್ನು ಹೊತ್ತು ತಂದು ರಾಮನ ಅರಮನೆಯ ಮುಂದೆ ಪುತ್ರಶೋಕದಿಂದ ರೋದಿಸುತ್ತಾನೆ. ಮಗನ ಅಕಾಲ ಮೃತ್ಯುವಿಗೆ ದೊರೆಯ ದೋಷವನ್ನೇ ಕಾರಣವಾಗಿಸಿ ನ್ಯಾಯ ಕೇಳುತ್ತಾನೆ. ಮಂತ್ರಾಲೋಚನೆಯ ನಂತರ ಶೂದ್ರನೊಬ್ಬನು ತಪಸ್ಸು ಮಾಡುತ್ತಿರುವುದರಿಂದ ಬ್ರಾಹ್ಮಣನ ಮಗನಿಗೆ ಅಕಾಲ ಮೃತ್ಯುವಾಗಿದೆ ಎಂದು ನಾರದ ಎಂಬುವನಿಂದ ತಿಳಿದು ಬರುತ್ತದೆ. ಅವನ ಮಾತಿನಂತೆ ರಾಮನು ಬಾಲಕನ ಪಾರ್ಥಿವ ಶರೀರವು ಕೆಡದಂತೆ ಎಣ್ಣೆಯಲ್ಲಿ ಇಡಿಸಿ ಪುಷ್ಪಕ ವಿಮಾನವನ್ನೇರಿ ಎಲ್ಲ ದಿಕ್ಕುಗಳಲ್ಲೂ ಹುಡುಕಿ ಕೊನೆಗೆ ದಕ್ಷಿಣ ದಿಕ್ಕಿನಲ್ಲಿ ತಪಸ್ಸು ಮಾಡುತ್ತಿರುವ ಶಂಬೂಕನನ್ನು ಕಂಡು ಅಭಿನಂದಿಸುತ್ತಾನೆ. ತಾನು ರಾಮ ದಶರಥನ ಮಗ ಎಂದು ಸ್ವಪರಿಚಯ ಮಾಡಿಕೊಂಡ ಶ್ರೀರಾಮ ಕುತೂಹಲದಿಂದ "ನೀನು ಜನ್ಮತಃ ಯಾವ ವರ್ಣಕ್ಕೆ ಸೇರಿದವನು?" ಎಂದು ಪ್ರಶ್ನಿಸುತ್ತಾನೆ. ಶಂಬೂಕನು ಸತ್ಯಕಾಮ ಜಾಬಾಲಿಯು ಹೇಳಿದಂತೆ ತಾನು ಶೂದ್ರ ಎಂಬ ಸತ್ಯವನ್ನು ಹೇಳುತ್ತಿದ್ದಂತೆಯೇ, ಅವನ ಮಾತು ಮುಗಿಯುವ ಮುನ್ನವೇ ರಾಮನ ಖಡ್ಗ ಅವನನ್ನು ಕೊಲ್ಲುತ್ತದೆ.

ಇಂದ್ರಾದಿ ದೇವತೆಗಳೆಲ್ಲ ರಾಮನ ಕಾರ್ಯವನ್ನು ಹೊಗಳಿ ಶೂದ್ರನ ವಿನಿಪಾತವಾದ ಮರುಕ್ಷಣವೇ ಬ್ರಾಹ್ಮಣ ಕುಮಾರನಿಗೆ ಮರುಜೀವ ದೊರಕಿಸಿ ಕೊಡುತ್ತಾರೆ. ಇದು ರಾಮಾಯಣದಲ್ಲಿರುವ ಕಥಾ ಭಾಗ.

ರಸಋುಷಿ ಕುವೆಂಪು ಕೃತ ಪ್ರಸ್ತುತ ನಾಟಕದಲ್ಲಿ ಶೂದ್ರನೊಬ್ಬ ತಪಸ್ಸು ಮಾಡುತ್ತಿರುವುದು ರಾಮನಿಗೆ ತಿಳಿದಿದ್ದರೂ ರಾಜನಾಗಿ ಅದಕ್ಕೆ ಸೂಕ್ತ ಶಿಕ್ಷೆ ನೀಡದ ರಾಮನೇ ಬ್ರಾಹ್ಮಣನ ಪ್ರಕಾರ ದೋಷಿ. ಜಾತಿ ಮತಗಳ ಸೋಂಕಿರದ ಎಳೆಯ ಮಗು ಮಹರ್ಷಿಗೆ ನಮಿಸಲು ಅನುವಾದಾಗ ಬ್ರಾಹ್ಮಣನ ಮೇಲ್ವರ್ಣದ ಗರ್ವ ತಡೆಯುತ್ತದೆ. ಹೂ ಕೊಯ್ಯುವಾಗ ಹಾವು ಕಚ್ಚಿ ಮಗು ಸಾಯುತ್ತದೆ. ಮಗನ ಸಾವನ್ನು ರಾಜನ ತಲೆಗೆ ಕಟ್ಟುವ ಬ್ರಾಹ್ಮಣನಿಗೆ ನ್ಯಾಯ ದೊರಕಿಸಿಕೊಡಲು ರಾಮನು ಹೊರಟು ಬಿಲ್ಲನ್ನು ಅಣಿ ಮಾಡುವ ನೆವದಿಂದ ಶಂಬೂಕನಿಗೆ ಕೈಜೋಡಿಸಿ ಬ್ರಹ್ಮಾಸ್ತ್ರವನ್ನು ಶಂಬೂಕನೆಡೆಗೆ ಪ್ರಯೋಗಿಸುತ್ತಾನಾದರೂ ಅದು ಮಹರ್ಷಿಗೆ ವಿನೀತವಾಗಿ ಪ್ರದಕ್ಷಿಣೆ ಮಾಡಿ ನಮಸ್ಕರಿಸಿ ಬ್ರಾಹ್ಮಣನನ್ನು ಗುರಿಯಾಗಿಸಿಕೊಂಡು ಬರಲಾರಂಭಿಸುತ್ತದೆ. ರಕ್ಷಣೆಗಾಗಿ ರಾಮನ ಮೊರೆ ಹೊಕ್ಕ ಬ್ರಾಹ್ಮಣನಿಗೆ "ರಾಮ ಸನ್ಮತಿಯ ಸತ್ಕೃತಿಗೆ ಶಾಸ್ತ್ರದ ನೆರವು ಬೇಕೆ?" ಎಂದು ಮನುಷ್ಯತ್ವದ ಸಹಜ ಗುಣವನ್ನು ವಿಶ್ವಮಾನವತೆಯ ವಿವೇಚನೆಯನ್ನು ಅವನಲ್ಲಿ ಬಿತ್ತುತ್ತಾನೆ. 'ಆರಾದರೇನು ಆರಾಧ್ಯರ್ ತಪೋಧನರ್ ನಮಸ್ಕಾರಮೆ ಪುಣ್ಯಂ ತಿರಸ್ಕಾರಮೆ ಪಾಪಂ' ಎಂಬ ಸಾರ್ವಕಾಲಿಕ ಸತ್ಯವನ್ನು ಬ್ರಾಹ್ಮಣನಿಂದ ಹೊರಡಿಸುವಲ್ಲಿ ಯಶಸ್ವಿಯೂ ಆಗುತ್ತಾನೆ. ತನ್ನೊಳಗಿನ ವರ್ಣಾಂಧತೆಯ ಕಾಳಿಕೆಯಿಂದ ಮುಕ್ತನಾಗಿ ಹೊಸ ಹುಟ್ಟು ಪಡೆದ ಬ್ರಾಹ್ಮಣ ಶಂಬೂಕ ಮಹರ್ಷಿಗೆ ಸಾಷ್ಟಾಂಗ ನಮಸ್ಕಾರ ಮಾಡಿದ ಮರುಕ್ಷಣವೇ ಬ್ರಾಹ್ಮಣನ ಮಗ ಜೀವತಳೆದು ನಿಲ್ಲುತ್ತಾನೆ. ರಾಮ ತನಗೆ ನಮಿಸಿದ ದ್ವಿಜ ಕುಮಾರನಿಂದ ಶಂಬೂಕ ಮಹರ್ಷಿಗೆ ಕೈ ಮುಗಿಸುತ್ತಾನೆ. ರಾಮನೂ ಸೇರಿದಂತೆ ನಾಟಕದ ಎಲ್ಲ ಪಾತ್ರಗಳೂ ಔನ್ನತ್ಯಕ್ಕೇರುತ್ತವೆ.

ದೃಶ್ಯ ಒಂದರಲ್ಲಿ ವೃಕ್ಷಭೈರವ ಮತ್ತು ಮೃತ್ಯು ಇವರೀರ್ವರ ಸಂವಾದವಿದೆ. ಶಂಬೂಕ ತಪೋನಿರತನಾದ ಬನದ ಪ್ರವೇಶದಲ್ಲಿದ್ದ ಬೃಹದಾಕಾರದ ಆಲದ ಮರವು ವೃಕ್ಷಭೈರವನಾಗಿ ತಪೋವನವನ್ನು ರಕ್ಷಿಸುವ ದ್ವಾರಪಾಲಕನ ಕೈಂಕರ್ಯ ಮಾಡಿದೆ. ಬನಕ್ಕೆ ಮೃತ್ಯುಛಾಯೆ ಪ್ರವೇಶಿಸುವ ರೀತಿಯನ್ನು ವಿಶೇಷವಾಗಿ ತೋರಿಸಲಾಗಿದೆ. ಶೂನ್ಯವಾಗಿದ್ದ ಬಯಲು ನಸುಗಪ್ಪಾಗಿ ಕರಿ ಮಂಜು ದಟ್ಟವಾಗಿ ಬರಬರುತ್ತಾ ಗಟ್ಟಿಯಾಗಿ ಮೃತ್ಯುವಿನ ಸ್ಪಷ್ಟ ರೂಪ ತಳೆದು ನಿಲ್ಲುವುದು. ನಿಧಾನವಾಗಿ ತಪೋವನದೊಳಗೆ ಬರುತ್ತಿರುವ ಮೃತ್ಯುವಿನ ಆಗಮನವನ್ನು ಅರಿತ ಪ್ರಕೃತಿ ಕ್ಷೋಭೆಗೆ ಒಳಗಾಗುತ್ತಿರುವುದನ್ನು ಕಂಡ ವೃಕ್ಷಭೈರವ ಅದನ್ನು ತಡೆಯುತ್ತದೆ. ಘೋರಮುಖಿ, ವಿಕೃತವದನೆ ಎಂದೆಲ್ಲ ಭಂಗಿಸಿ ಅಮೃತವಾದ ತಪೋವನ ಕ್ಷೇತ್ರದೊಳಗೆ ಮೃತ್ಯುವಿನ ಪ್ರವೇಶವನ್ನು ನಿರಾಕರಿಸಿದರೂ ಮುನ್ನುಗ್ಗುವ ಮೃತ್ಯುವನ್ನು "ಮಹರ್ಷಿ ಶಂಬೂಕ ದೇವನಾಣೆ ಕಲ್ಲಿನಂತೆ ನಿಲ್ಲು" ಎಂದು ವೃಕ್ಷಭೈರವ ತ್ರಿಶೂಲವನ್ನು ಬೇಲಿಯಂತೆ ಕಟ್ಟುತ್ತದೆ. ಆಗ ಮೃತ್ಯುವು ಧರ್ಮದೇವತೆಯ ಆಜ್ಞೆಯಂತೆ ತಾನು ಶಂಬೂಕಋುಷಿಯ

ಗೌರವಕ್ಕಾಗಿ ಬಂದಿರುವೆನೆಂದೂ, ಭೈರವ ಶಂಬೂಕ ಮಹರ್ಷಿಗೆ ಮೈಗಾವಲಾದರೆ ತಾನು ಆತನ ಉಸಿರಿಗೆ ಕಾವಲು ಎಂದೂ ಹೇಳಿ ತಪೋವನ ಪ್ರವೇಶಿಸಲು ಅನುವು ಮಾಡಿಕೊಡಬೇಕಾಗಿ ಹೇಳುತ್ತದೆ. ಬ್ರಾಹ್ಮಣನೊಬ್ಬನು ತನ್ನ ಮಗನ ಜೊತೆ ಪೂಜಾ ವಿಧಿಗೆ ಹೂ ಕೊಯ್ಯಲೆಂದು ಒಳ ಹೊಕ್ಕಿದ್ದು, ಶಂಬೂಕ ಮಹರ್ಷಿಯು ಹುಟ್ಟಿನಲ್ಲಿ ಶೂದ್ರನಾಗಿದ್ದನೆಂದು ಅವಜ್ಞೆಯಿಂದ ಅಧರ್ಮವನ್ನು ಎಸಗಿದ ಕಾರಣದಿಂದ ತಾನು ತಪೋವನ ಪ್ರವೇಶಿಸಬೇಕಾಗಿದೆ ಎಂದು ಭೈರವನ ಸಂದೇಹವನ್ನು ನಿವಾರಿಸುತ್ತದೆ. ತಕ್ಷಣವೇ ತ್ರಿಶೂಲದ ಬೇಲಿಯನ್ನು ತೆಗೆದ ಭೈರವ ಮೃತ್ಯುವಿಗೆ ಒಳ ಹೋಗಲು ದಾರಿ ಮಾಡಿಕೊಡುತ್ತದೆ. ನಾಟಕದ ಪೀಠಿಕಾ ಭಾಗವಾಗಿರುವ ಈ ದೃಶ್ಯದಲ್ಲಿ ಮುಂದೆ ಬರಲಿರುವ ಎಲ್ಲಾ ಪಾತ್ರಗಳ ಪರಿಚಯವನ್ನು ಸೂಕ್ಷ್ಮವಾಗಿ ಮಾಡಿಕೊಡಲಾಗಿದೆ. ಜನ್ಮತಃ ಶೂದ್ರನಾದರೂ ತಪೋನಿರತನಾಗಿರುವ ಶಂಬೂಕ ವರ್ಣವ್ಯವಸ್ಥೆಯಲ್ಲಿ ಕೆಳಸ್ತರದಲ್ಲಿದ್ದರೂ ಋಷಿತ್ವದಿಂದ ಮಹರ್ಷಿಯಾಗಿರುವುದು, ಅತ್ಯಂತ ಮೇಲುಸ್ತರದಲ್ಲಿರುವ ವರ್ಗದ ಬ್ರಾಹ್ಮಣ ಅವನನ್ನು ಅವಜ್ಞೆ ಮಾಡುವುದು, ಧರ್ಮರಾಜ್ಯವನ್ನು ಆಳುತ್ತಿರುವ ಶ್ರೀರಾಮನ ಸಮತೋಲನದ ಸಮತೂಕದ ಕರ್ತವ್ಯ ಹೀಗೆ ಈ ಪಾತ್ರಗಳ ವಿವರಗಳನ್ನು ಇಲ್ಲಿ ಹೇಳಲಾಗಿದೆ. ಮುಂದಿನ ದೃಶ್ಯಗಳಲ್ಲಿ ಅದೃಶ್ಯವಾಗುವ ಭೈರವ ಹಾಗೂ ಒಮ್ಮೆ ಮಾತ್ರ ಮಾತಾಡುವ ಮೃತ್ಯುವಿನ ಮೂಲಕ ಈ ದೃಶ್ಯದಲ್ಲಿ ಇದುವರೆಗಿನ ಕಥೆಯನ್ನು ಹೇಳಿಸಲಾಗಿದೆ. ದೃಶ್ಯದ ಅಂತ್ಯದಲ್ಲಿ 'ಏನ್ ಭಯಂಕರ ಪಾಪಂ ಶ್ರೀರಾಮನಾಳುತಿರ್ಪೀ ಧರ್ಮರಾಜ್ಯದೊಳ್' ಎಂದು ಭೈರವ ಪಾತ್ರ ಹೇಳುವ ಮೂಲಕ ಶ್ರೀರಾಮನ ಧರ್ಮರಾಜ್ಯದಲ್ಲಿ ಬ್ರಾಹ್ಮಣನ ಭಯಂಕರ ಪಾಪಕ್ಕೆ ದೊರೆಯಬಹುದಾಗಿರುವ ಫಲಿತಾಂಶವನ್ನು ಕೂಡ ತುಂಬಾ ಸೂಕ್ಷ್ಮವಾಗಿ ಹೇಳಲಾಗಿದೆ.

ದೃಶ್ಯ ಎರಡರಲ್ಲಿ ಶ್ರೀರಾಮ ಮತ್ತು ಬ್ರಾಹ್ಮಣನ ಸಂಭಾಷಣೆ ಇದೆ. ಶ್ರೀರಾಮನ ಅರಮನೆಯ ಉದ್ಯಾನದ ಆವರಣದಲ್ಲಿ ಬ್ರಾಹ್ಮಣನೊಬ್ಬನು ಮಗನ ಅಕಾಲ ಮರಣಕ್ಕಾಗಿ ದುಃಖಿಸುತ್ತಿರುತ್ತಾನೆ. ರಾಮನ ದರ್ಶನದಿಂದ ಪುನೀತನಾದ ಬ್ರಾಹ್ಮಣ ಶೂದ್ರ ಶಂಬೂಕನ ತಪೋ ದುಷ್ಕೃತಿಗೆ ಬಲಿಯಾಗಿ ತನ್ನ ಮಗ ಅಕಾಲ ಮೃತ್ಯುವಿಗೆ ಈಡಾದುದನ್ನು ವಿವರಿಸುತ್ತಾನೆ. ಇದರಿಂದ ರಾಮನಿಗೆ ಸತ್ತ ಮಗುವಿನ ಬಗ್ಗೆ ಕನಿಕರವೂ ಬ್ರಾಹ್ಮಣನ ವರ್ಣಾಂಧತೆಗೆ ಕೋಪವೂ ಏಕಕಾಲದಲ್ಲಿ ಉಂಟಾಗಿ ಅವನಿಗೆ ಬುದ್ಧಿ ಕಲಿಸಲು ಅವನೊಂದಿಗೆ ಪುಷ್ಪಕ ವಿಮಾನವನ್ನೇರಿ ಶಂಬೂಕಾಶ್ರಮಕ್ಕೆ ಬರುತ್ತಾನೆ. ಇದು ಈ ದೃಶ್ಯದಲ್ಲಿರುವ ಕಥಾ ಭಾಗ.

ಬ್ರಾಹ್ಮಣ ಐದು ವರ್ಷದ ತನ್ನ ಮಗನ ಸಾವಿನಿಂದ ಕಂಗೆಟ್ಟು ವಿಧವಿಧವಾಗಿ ರೋದಿಸುತ್ತಾನೆ. ಅಪ್ರಾಪ್ತ ಯೌವನನಾದ, ಪಿತೃಕಾರ್ಯ ಮಾಡಬೇಕಾದ, (ಈ ಪ್ರಯೋಗ ರನ್ನನ ದುರ್ಯೋಧನ ವಿಲಾಪದಲ್ಲಿ ಮಡಿದ ಲಕ್ಷಣಕುಮಾರನನ್ನು ಕಂಡು 'ಜನಕಂಗೆ ಜಲಾಂಜಲಿಯಂ ತನೂಭವಂ ಕುಡುವುದುಚಿತಂ........ ಕ್ರಮವಿಪರ್ಯಯಂ ಮಾಡುವುದೇ...' ನೆನಪಿಸುತ್ತದೆ). ತಾನು ನಿಷ್ಪಾಪಿಯೂ ಸತ್ಯವಂತನೂ ಅಹಿಂಸಾ ಮನೋಭಾವದವನೂ ಆಗಿದ್ದು ತನ್ನ ಮಗನ ಸಾವಿಗೆ

ಕಾರಣವೇನಿರಬಹುದು ಎಂದು ಚಿಂತಿಸುತ್ತಾನೆ. ಇಕ್ಷ್ವಾಕು ವಂಶವನ್ನು ಪೊರೆದ ಅಯೋಧ್ಯಾನಗರಲಕ್ಷ್ಮಿಯನ್ನು ಸ್ಮರಿಸಿ ಹಿಂದೆಂದೂ ಇಂತಹ ಘೋರವನ್ನು ಕಂಡೂ ಕೇಳಿಯೂ ಇಲ್ಲ ಎಂದು ಹಳಹಳಿಸುತ್ತಾನೆ. ಶ್ರೀರಾಮನ ಆಳ್ವಿಕೆಯಲ್ಲೇ ರಾಮಪ್ರಜೆಗೆ ಕುಂದಾಗಿದ್ದು 'ದೊರೆಯ ದೋಷಮೆ ಕಾರಣಂ ಪ್ರಜಾಸಂಕಟಕೆ, ಏನೊ ಒಂದಿರಲೆ ವೇಳ್ಕುಂ ರಾಮಪಾಪಂ' ಎಂದು ಯೋಚಿಸುತ್ತಾನೆ. ಕೊನೆಗೆ, ಶೂದ್ರನಾದ ಶಂಬೂಕ ತಪಸ್ಸು ಮಾಡುತ್ತಿರುವುದಕ್ಕೆ ಮುನಿದ ಧರ್ಮದ ಶಾಪಕ್ಕೆ ಮಗ ಬಲಿಯಾಗಿದ್ದಾನೆ ಎಂದು ನಿರ್ಧರಿಸುತ್ತಾನೆ. ಮಡಿದ ಮಗನನ್ನು ಮರಳಿಸದಿದ್ದರೆ ಸೂರ್ಯ ಚಂದ್ರರ ಸಾಕ್ಷಿಯಾಗಿ ತಾನೂ ಇಲ್ಲಿಯೇ ಮಡಿಯುವೆನೆಂದೂ ಬ್ರಹ್ಮಹತ್ಯಾ ದೋಷ ಅಪರಾಧಿಯಾದ ರಾಮನಿಗೆ ತಟ್ಟಲೆಂದೂ ಬೊಬ್ಬಿಡುತ್ತಾನೆ. ಅಯೋಧ್ಯೆಯೂ, ಸ್ವರ್ಗದಲ್ಲಿರುವ ರವಿಕುಲದ ರಾಜರನ್ನೂ ಕೂಡ ಈ ಪ್ರತಿಜ್ಞೆಗೆ ಸಾಕ್ಷಿ ಮಾಡುತ್ತಾನೆ.

ಇಷ್ಟಾದರೂ, ಅರಮನೆಯ ಕಡೆಯಿಂದ ಉದ್ಯಾನಕ್ಕೆ ಬರುತ್ತಿರುವ ಶ್ರೀರಾಮನನ್ನು ಕಂಡು ಬ್ರಾಹ್ಮಣನ ದುಃಖ ಭಾವ ಧನ್ಯ ಭಾವಕ್ಕೆ ತಿರುಗಿ, ಪುನೀತನಾಗಿ ರಾಮನ ವ್ಯಕ್ತಿತ್ವವನ್ನು ತನ್ನಲ್ಲೇ ಪ್ರಶಂಸಿಸುತ್ತಾನೆ. ಆಶೀರ್ವಾದವೇ ಮೈವೆತ್ತು ಬಂದಂತೆ ಬರುತ್ತಿರುವ ರಾಮದರ್ಶನದಿಂದ ತಾನೂ ತನ್ನ ಮಗನೂ ಬದುಕುವೆವು ಎಂದು ಆಶಿಸುತ್ತಾನೆ. ದೂರವಾದ (ದೂರಮಾಡಿದ) ಸೀತಾಶೋಕದಿಂದ ಮರುಕಳಿಸಿದ ರೋದನ ಬಂದೆಡೆಗೆ ಬಂದ ರಾಮನು ತನ್ನ ಹಾಳುಕಿವಿಗೆ ರೋದನವೇ ಸಂಗೀತವಾಗಿದೆ, ಗೋಳೇ ಕೂಳಾಗಿದೆ, ಕಣ್ಣೀರೇ ಅಮೃತವಾಗಿದೆ ಎಂದು ನಿಡುಸುಯ್ಯುತ್ತಾನೆ. ತನ್ನಡೆಗೆ ಬರುತ್ತಿರುವ ವೃದ್ಧನೂ ದುಃಖ ಜರ್ಝರಿತನೂ ಆದ ಬ್ರಾಹ್ಮಣನನ್ನು ಕಂಡು ಎರಡು ಹೆಜ್ಜೆ ಮುಂದಿಡುತ್ತಾನೆ. ಅನಾಥ ರಕ್ಷಕ, ದುಃಖ ವಿಮೋಚಕ, ಸರ್ವಲೋಕಪ್ರಭೂ ಸಲಹು ಎಂದು ರಾಮನ ಕಾಲಿಗೆ ಎರಗುವ ಬ್ರಾಹ್ಮಣನನ್ನು "ಮುದುಕರು, ಹಿರಿಯರು, ಬ್ರಾಹ್ಮಣರೂ ಆದ ನೀವು ಹೀಗೆ ನನಗೆ ನಮಸ್ಕರಿಸುವುದು ತರವಲ್ಲ" ಎನ್ನುತ್ತಾನೆ. ಅದಕ್ಕೆ ಬ್ರಾಹ್ಮಣ ಬೇಡಲು ಬಂದಿರುವ ತಾನು ಸಹಜವಾಗಿಯೇ ನಮಸ್ಕರಿಸಿದ್ದೇನೆ ದಾಶರಥಿ ಎನ್ನುತ್ತಾನೆ. ಇಲ್ಲಿ 'ದಾಶರಥಿ' ಎಂಬುದನ್ನು ಆ ಸಂದರ್ಭದಲ್ಲಿ ದಶರಥನ ನೆನಪನ್ನು ರಾಮನಿಗೆ ತರಿಸಲು ಬಳಸಲಾಗಿದೆ. ಆದಷ್ಟೂ ರಾಮನ ಮನಸ್ಸನ್ನು ಕರಗಿಸಿ ತನ್ನೆಡೆಗೆ ತಿರುಗಿಸಲು ಬ್ರಾಹ್ಮಣ ಬಯಸಿದ್ದಾನೆ. ಆದ್ದರಿಂದಲೇ ನೀವು ಯಾರು? ದುಃಖವೇನು? ಎಂದು ಕೇಳುವ ರಾಮನ ಪರಿಚಯವನ್ನೇ ಮಾಡಿಕೊಡುವ ಬ್ರಾಹ್ಮಣ, ತನ್ನ ಕಾರ್ಯಸಿದ್ಧಿಗಾಗಿ ಬ್ರಹ್ಮನ ತಂದೆಯಂತೆ, ಸ್ಥಿತಿಕರ್ತನಾದ ಭಗವಂತನಂತೆ ರಾಮನನ್ನು ಕಾಣುತ್ತಿದ್ದಾನೆ.

ಶ್ರೀರಾಮನು "ಬ್ರಹ್ಮತ್ವದ ಕಲ್ಪನೆಯನ್ನು ಚೆನ್ನಾಗಿ ತಿಳಿದ ವಿಪ್ರೋತ್ತಮ, ತಮ್ಮ ದುಃಖವನ್ನು ಹೇಳಿ" ಎಂದಾಗ ಮಗನ ಸಾವನ್ನು ಅರುಹುತ್ತಾನೆ. "ಹೇ ದಯಾನಿಧಿ" ಎಂದು ರಾಮನನ್ನು ಕರೆಯುವ ಮೂಲಕ ಎಂಥ ಕಠಿಣ ಕಾರ್ಯವನ್ನಾದರೂ ಸುಲಭವಾಗಿ ಮಾಡುವ, ಲೋಕಾಪವಾದ ಬಂತೆಂದು ಪರಿಶುದ್ಧೆಯೂ ಸೌಂದರ್ಯಲಕ್ಷ್ಮಿಯೂ ಆದ ಸೀತಾದೇವಿಯನ್ನು ತುಂಬು ಬಸುರಿ ಎಂದೂ ಕೂಡ ಕರುಣಿಸದೆ ಅಡವಿಗಟ್ಟಿರುವ ರಾಮನ ಭೀಷ್ಮಪೌರುಷವನ್ನು ಹೊಗಳುತ್ತಾನೆ. ಇದೂ

ಕೂಡ ಕಾರ್ಯಸಿದ್ಧಿಯ ಒಂದು ತಂತ್ರ. ಹೇ ದಯಾನಿಧಿ ಎಂದು ಸಂಬೋಧಿಸುವುದು ರಾಮನಿಂದ ಕರುಣೆ ಬೇಕಾಗಿರುವುದನ್ನು ಸೂಚಿಸುತ್ತದೆ. ಭಕ್ತರನ್ನು ಕಷ್ಟಕಾಲದಲ್ಲಿ ನಾಮಸ್ಮರಣೆಯ ಮಾತ್ರದಿಂದಲೇ ರಕ್ಷಿಸುವ ಕೃಪಾಸಾಗರನಾದ ರಾಮನು ಸೀತಾ ಪರಿತ್ಯಾಗದಂಥ ಸಮಯದಲ್ಲಿ ಕಲ್ಲೆದೆಯವನೂ ಆಗುವ ವಿರೋಧಾಭಾಸವನ್ನು ನಾಜೂಕಾಗಿ ವ್ಯಂಗ್ಯದಿಂದ ಹೇಳುತ್ತ ರಾಮನನ್ನು ಶಂಬೂಕ ಹನನಕ್ಕೆ ಅಣಿಗೊಳಿಸುತ್ತಿದ್ದಾನೆ. ಭೂತಕಾಲದ ತನ್ನ ವೈಯಕ್ತಿಕ ಬದುಕಿನ ಕಹಿ ನೆನೆಪಿನಿಂದ ರಾಮ ಬೇಸರಿಸಿದರೂ ಅವನ ದೌರ್ಬಲ್ಯಗಳನ್ನು ಸಂದರ್ಭೋಚಿತವಾಗಿ ತನ್ನ ಸ್ವಾರ್ಥಕ್ಕಾಗಿ ಬಳಸಿಕೊಳ್ಳುವ ಹವಣಿಕೆಯಲ್ಲಿದ್ದಾನೆ ಬ್ರಾಹ್ಮಣ. 'ಮಹೀಶ್ವರ' ಎಂದು ಸಂಬೋಧಿಸುವಲ್ಲಿ ರಾಜನ ವೈಯಕ್ತಿಕ ವಿಷಯವನ್ನು ಕೆದಕಿದ್ದು ತಪ್ಪಾಯಿತು, ರಾಜನಾದ ನೀನು ನನ್ನ ಕಂದನ ಪ್ರಾಣವನ್ನು ಕೃಪೆ ಮಾಡಿ ನೀಡು ಎಂಬ ಭಾವವಿದೆಯಾದರೂ ಸೀತೆಯನ್ನು ಹೆಸರಿಸುವ ಮೂಲಕ ರಾಮನ ಮನದಲ್ಲಿ ಅಪರಾಧಿಪ್ರಜ್ಞೆಯನ್ನು ಮೂಡಿಸುವಲ್ಲಿ ಯಶಸ್ವಿಯಾಗುತ್ತಾನೆ. ರಾಮನು "ಧರ್ಮಾಧಿಕಾರಿಯಾದ ವೈವಸ್ವತನು ನಿಷ್ಕಾರಣವಾಗಿ ಅಪ್ರಾಪ್ತನನ್ನು ಕೊಂಡೊಯ್ಯುವವನಲ್ಲ, ಯಾವುದೋ ಧರ್ಮಚ್ಯುತಿ ಇರಲೇಬೇಕು, ನಿಮ್ಮಿಂದೇನಾದರೂ ಅಗೌರವ ನಡೆಯಿತೇ?" ಎಂದಾಗ ಬ್ರಾಹ್ಮಣನು ಅದಕ್ಕೆ ತನ್ನ ತಂದೆ ತಾಯಿ ಗುರುಗಳು ಸಜ್ಜನರು, ತನ್ನಾತ್ಮ ಬ್ರಾಹ್ಮಣರಲ್ಲಿ ಹುಟ್ಟಿದೆ ಎಂದು ಉತ್ತರಿಸುವ ಮೂಲಕ ಮತ್ತೊಮ್ಮೆ ತಾನು ಉಚ್ಚ ಕುಲದವನೆಂದು ಒಣಹೆಮ್ಮೆ ಪಡುತ್ತಾನೆ. ಅದನ್ನು ಒಪ್ಪುವ ರಾಮನು ಮಗನ ಸಾವಿಗೆ ಕಾರಣರಾದವರು ಇನ್ಯಾರಾದಾದರೂ ಇದ್ದರೆ ಹೇಳಿ ಎಂದಾಗ ಬ್ರಾಹ್ಮಣನು ಬೆದರುತ್ತ ಮಹಾಪುರುಷ, ಅದಕ್ಕೆ ಕಾರಣ ನೀನೇ ಎಂದು ತೊದಲುತ್ತಾನೆ. ಬೆಚ್ಚಿದ ರಾಮ "ಅಪರಾಧಗಳಿಗೆಲ್ಲ ನಾನೇ ಕಾರಣನೋ ಏನೋ? ಅಂದು ಅಗಸ ಮಾತಾಡಿದ, ಇಂದು ಈ ಹಾರುವ ಮಾತಾಡುತ್ತಿದ್ದಾನೆ" ಎಂದುಕೊಂಡು ತನ್ನ ಅಪರಾಧವೇನೆಂದು ಕೇಳುತ್ತಾನೆ. ಶಿಷ್ಟಪರಿತ್ರಾಣ ಮೂರ್ತಿ ಎನ್ನುವ ಮೂಲಕ ರಾಮನನ್ನು ಈಗ ದುಷ್ಟಶಿಕ್ಷಕನೂ ಆಗಬೇಕು ಎಂದು ಸೂಚ್ಯವಾಗಿ ಹೇಳುತ್ತಿದ್ದಾನೆ.

ಹೂ ಕೊಯ್ಯಲೆಂದು ಬನಕ್ಕೆ ಬಂದ ತಮಗೆ ತಪಸ್ಸು ಮಾಡುತ್ತಿದ್ದ ಶಂಬೂಕ ಕಾಣಿಸಿದ್ದನ್ನು ಹೇಳುವ ಅವನ ಮಾತುಗಳನ್ನು ಕೇಳಿಸಿಕೊಂಡ ರಾಮನ ಮುಖ ಗಂಟಿಕ್ಕಿದ್ದನ್ನು ನೋಡಿದ ಬ್ರಾಹ್ಮಣನಿಗೆ ಸಂತಸವಾಗುತ್ತದೆ. "ಏಂ ರೌದ್ರಮಾದುದೀ ರಾವಣಾರಿಯ ಮುಖಂ" ಎಂದುಕೊಳ್ಳುವಲ್ಲಿ ರಾವಣನಿಗಾದ ಗತಿಯೇ ಶೂದ್ರನಿಗೂ ಆಗುತ್ತದೆ ಎಂಬ ನಂಬಿಕೆ ಅವನಿಗೆ. ರಾಮನನ್ನು ಸಂಪೂರ್ಣವಾಗಿ ಶೂದ್ರಹನನ ಕಾರ್ಯಕ್ಕೆ ಅಣಿಗೊಳಿಸಿರುವೆನೆಂದು ಭಾವಿಸುವ ಬ್ರಾಹ್ಮಣನ ಕಣ್ಣಲ್ಲಿ ಇಲ್ಲಿಯವರೆಗೂ ಭಗವಂತನಾಗಿದ್ದ ಶ್ರೀರಾಮ ಇಲ್ಲಿಂದಾಚೆಗೆ ಈ ದೃಶ್ಯದ ಅಂತ್ಯದವರೆಗೂ ರಾಮಚಂದ್ರ ಎಂದು ನಾಮಧೇಯದಿಂದ ಮಾತ್ರ ಸಂಬೋಧಿಸಲ್ಪಟ್ಟಿದ್ದಾನೆ. ಮಹರ್ಷಿಗೆ ನಮಸ್ಕರಿಸಿದಿರಾ ಎಂಬ ರಾಮನ ಪ್ರಶ್ನೆಗೆ ಅಂತಹ ಘೋರವನ್ನು ನಾವು ಮಾಡಲಿಲ್ಲವೆಂದೂ ಅರಿಯದ ಮಗನು ಕೈಮುಗಿಯಲಿದ್ದಾಗ ಶೂದ್ರನಿಗೆ

ನಮಿಸಬಾರದೆಂದು ತಿದ್ದಿ ತಾನದನ್ನು ತಡೆದೆನೆಂದೂ ಹೇಳುವ ಬ್ರಾಹ್ಮಣನಿಗೆ ರಾಮನ "..........ವೇದಮೂರ್ತಿಗಳಲ್ಲವೆ' ಎಂಬುದರ ಹಿಂದಿನ ವ್ಯಂಗ್ಯವನ್ನು ಅರ್ಥಮಾಡಿಕೊಳ್ಳದ ಬ್ರಾಹ್ಮಣ ಇಷ್ಟು ಅಧರ್ಮವನ್ನಾದರೂ ತಡೆಯದಿದ್ದರೆ ನಮಗೆ ನರಕಸಿಗುವುದಿಲ್ಲವೆ ಎನ್ನುತ್ತಾನೆ. ರಾಮನ ವ್ಯಂಗ್ಯ ಮತ್ತೂ ಮುಂದುವರಿಯುತ್ತದೆ, ಸ್ವರ್ಗವಾಗಿರುವುದನ್ನು ನೀವು ಮಾಡಿರುವುದರಿಂದಲೇ ನಿಮ್ಮ ಮಗ ಸ್ವರ್ಗಸ್ಥನಾಗಿದ್ದಾನೆ ಎನ್ನುವಿರಾ ಎನ್ನುವ ಮೂಲಕ ಹಿಂದೆ ಬ್ರಾಹ್ಮಣ ಸೀತೆಯ ಕುರಿತು ತನಗೆ ಮಾಡಿದ ವ್ಯಂಗ್ಯಕ್ಕೆ ಪ್ರತೀಕಾರ ತೀರಿಸಿಕೊಳ್ಳುತ್ತಾನೆ. ಆಗ ಬ್ರಾಹ್ಮಣನು ರಾಮಚಂದ್ರ ಎಂದು ಹೆಸರಿಸಿ, "ಶೂದ್ರ ತಪಸ್ಸು ಮಾಡುತ್ತಿರುವ ಒಂದು ಅಧರ್ಮಕ್ಕೆ, ನೀನು ರಾಜನಾಗಿ ಅದನ್ನು ತಡೆಯದೆ ವರ್ಣಾಶ್ರಮ ಧರ್ಮದ ಉಲ್ಲಂಘನೆ ಮಾಡಿದ ಪಾಪಕ್ಕೆ ನಿನ್ನ ಪ್ರಜೆಯೊಬ್ಬನು ಬಲಿಯಾಗಿದ್ದಾನೆ" ಎಂದು ನೇರವಾಗಿ ಹೇಳುವ ಮೂಲಕ ರಾಮನನ್ನೇ ಕಟಕಟೆಯಲ್ಲಿ ನಿಲ್ಲಿಸುತ್ತಾನೆ. ಬ್ರಾಹ್ಮಣನ ಈ ಶಾಸ್ತ್ರ ಮೂರ್ಖತನಕ್ಕೆ ಕೋಪಗೊಳ್ಳುವ ರಾಮನಲ್ಲಿ ಸತ್ತ ಮಗುವಿನ ಬಗ್ಗೆ ಕನಿಕರವೂ ಉಂಟಾಗುತ್ತದೆ. "ತಪಸ್ವಿಯ ತಿರಸ್ಕೃತಿಗೆ ಮುನಿದ ಧರ್ಮವು ಈತನ ಮುದ್ದು ಕಂದನಿಗೆ ನನ್ನ ರಾಜ್ಯದಲ್ಲಿಯೂ ಸಾವನ್ನು ತಂದಿದೆ. ತನ್ನ ತಪ್ಪನ್ನು ತಿಳಿಯಲಾರದ ಈತ ಮರೆಯಿಂದ ನನ್ನನ್ನು ಬಹಿರಂಗದಿಂದ ಶಂಬೂಕನನ್ನು ನಿಂದಿಸುತ್ತಿದ್ದಾನೆ" ಎಂಬ ಸತ್ಯವನ್ನು ಅರಿತ ರಾಮ "ಅಧರ್ಮ ಸಂಹಾರಕ್ಕೆ ಶಂಬೂಕಾಶ್ರಮಕ್ಕೆ ಹೋಗೋಣ, ಧರ್ಮ ಬದುಕಿದರೆ ನಿನ್ನ ಮಗನೂ ಬದುಕುತ್ತಾನೆ" ಎಂದು ಹೇಳುತ್ತಾನೆ. ಬ್ರಾಹ್ಮಣನು ತನ್ನ ಮನದಲ್ಲಿ ಇದುವರೆಗೆ ತಾನು (ಸೀತೆಯ ವಿಚಾರದಲ್ಲಿ) ನಿಂದಿಸಿದರೂ ತನ್ನ ಸಹಾಯಕ್ಕೆ ಬರುತ್ತಿರುವ ರಾಮನನ್ನು ಹೊಗಳಿದರೆ ಇನ್ನೆಷ್ಟು ಕಾರ್ಯಗಳು ಸಫಲವಾಗಬಹುದು ಎಂದುಕೊಂಡು, "ಹೋಗೋಣ ರಾಕ್ಷಸಾರಿ" ಎನ್ನುವ ಮೂಲಕ ಮತ್ತೊಮ್ಮೆ ರಾಮನ ಹಿಂದಿನ ರಾಕ್ಷಸವಧೆಗಳನ್ನು ನೆನೆಪಿಸುತ್ತಾನೆ.

ದೃಶ್ಯ 3ರಲ್ಲಿ ಶಂಬೂಕಾಶ್ರಮಕ್ಕೆ ಬ್ರಾಹ್ಮಣ ದ್ವಿತೀಯನಾಗಿ – ಗಮನಿಸಬೇಕು, ಮೊದಲ ಮತ್ತು ಎರಡನೆಯ ವರ್ಣಗಳು ಕಡೆಯದರ ದರ್ಶನಕ್ಕಾಗಿ ತಾವೇ ಸ್ವತಃ ಬಂದಿರುವದನ್ನು ಮತ್ತು ಎರಡನೇ ವರ್ಣವನ್ನು ಮುಂದಿಟ್ಟುಕೊಂಡು ಅಧರ್ಮವನ್ನಾಚರಿಸುವ ಮೊದಲವರ್ಗವನ್ನೂ ಸೂಚಿಸುತ್ತಿದ್ದು ಸಾಂಕೇತಿಕವಾಗಿದೆ – ಬಂದ ರಾಮನನ್ನು ತಪೋವನದ ಶಾಂತಿಯುತವಾದ ಪ್ರಕೃತಿ ಸ್ವಾಗತಿಸಿ ನಮಿಸುತ್ತದೆ. ಅಲ್ಲಿನ ರಮ್ಯತೆ ಮನಸೂರೆಗೊಂಡು ರಸಾನುಭವ ಪಡೆಯುತ್ತಾನೆ. ಬ್ರಾಹ್ಮಣನು ಕೋಸಲೇಶ್ವರ ಎಂದು ಕರೆದು ಮಗನ ಕಳೇಬರವನ್ನು ತೋರಿಸುವುದು, ಕೋಸಲದ ರಾಜನಾಗಿ ರಾಜ್ಯದ ಸಕಲ ಆಗುಹೋಗುಗಳನ್ನೂ ತಿಳಿದಿರಬೇಕಾಗಿದ್ದರೂ ನಿನ್ನ ರಾಜ್ಯದಲ್ಲಿ ನಡೆದಿರುವ ವರ್ಣಧರ್ಮದ ಉಲ್ಲಂಘನೆಯನ್ನು ನಾನು ನಿನಗೆ ತೋರಿಸುತ್ತಿದ್ದೇನೆ ಎನ್ನುವಂತಿದೆ. ಶವದ ಬಳಿ ಕುಸಿದು ರೋದಿಸುವ ಬ್ರಾಹ್ಮಣನನ್ನು ಕಂಡು ರಾಮನಿಗೂ ಅತೀವ ದುಃಖವಾಗುತ್ತದೆ. ತನ್ನ ವನಗಮನದ ನಂತರದ ದಶರಥನ ಶೋಕವನ್ನು ನೆನೆಯುವ ರಾಮನು 'ವೇದವೇತ್ತ' ಎಂದು ಸಂಬೋಧಿಸಿ ಜನನ ಮರಣಗಳ ಕುರಿತು ತಿಳಿದವನಾಗಿ ಹೀಗೆ ಶೋಕಿಸದಿರು, ನಡೆದ ಒಂದು

ಅಧರ್ಮವನ್ನು ಸರಿಪಡಿಸಿದಾಕ್ಷಣ ನಿನ್ನ ಮಗ ಬದುಕುತ್ತಾನೆ ಎಂದು ಸಂತೈಸುತ್ತಾನೆ.

ಕೈ ಮುಗಿದು ನಿಂತಿದ್ದ ಮೃತ್ಯುವನ್ನು ನೋಡಿ ಉಪವಾಸ ಆಚರಿಸುತ್ತಿರುವೆಯಾ ಎಂದ ರಾಮನಿಗೆ ದೈತ್ಯವೈರಿಯ ಧರ್ಮಸಿದ್ಧಿಗೆ ತಪಮಾಡುತ್ತಿರುವೆನು ಎಂದು ಮೃತ್ಯು ಹೇಳುವಲ್ಲಿ ರಾಕ್ಷಸ ಶತ್ರುವಾದ ರಾಮನಿಗೆ ಪ್ರಸ್ತುತ ಸಂದರ್ಭದಲ್ಲಿ ಬ್ರಾಹ್ಮಣನ ರೂಪದಲ್ಲಿರುವ ರಾಕ್ಷಸೀ ಮನೋಭಾವದ ವಿರುದ್ಧ ರಾಮನ ಧರ್ಮ ಗೆಲ್ಲಲೆಂದು ತನ್ನ ಧ್ಯಾನ ಎಂಬ ಧ್ವನಿಯಿದೆ. ತನಗೆ ದೃಗ್ಗೋಚರವಾಗದ ಅಮೂರ್ತ ಮೃತ್ಯುವಿನ ಜೊತೆ ಸಂಭಾಷಿಸುತ್ತಿದ್ದ ರಾಮನನ್ನು ಆಕಾಶವರ್ಣ ಎನ್ನುವ ಬ್ರಾಹ್ಮಣನ ಮಾತಿಗೆ ಉತ್ತರಿಸಲು ಹೋಗದೆ, 'ದ್ವಿಜೋತ್ತಮ' ಎಂದು ಕರೆದು ಆ ಶೂದ್ರನು ತಪಸ್ಸು ಮಾಡುತ್ತಿರುವ ತಾಣವನ್ನು ತೋರಿಸು ಎನ್ನುತ್ತಾನೆ. ಎರಡೆರಡು ಸಲ ಹುಟ್ಟಿ ಬಂದರೂ ನಿಜವಾದ ಧರ್ಮವನ್ನು ಅರ್ಥಮಾಡಿಕೊಳ್ಳುವಷ್ಟು ನಿಮ್ಮ ಮನಸ್ಸು ಉತ್ತಮವಾಗಲಿಲ್ಲವಲ್ಲ ಎಂದಂತಿದೆ ಇದು. ಅಗ್ರವರ್ಣನಾದ ತಾನು ಶಂಬೂಕನ ಹೆಸರು ಹೇಳುವುದೂ ಕೂಡ ಪಾಪ ಎಂದು ಬ್ರಾಹ್ಮಣನು ಹುತ್ತದೊಳಗಿರುವ ಶಂಬೂಕನನ್ನು ತೋರಿಸದೆ ಹುತ್ತದೆಡೆಗೆ ಕೈ ಮಾಡಿ “ಅದೆ ನೋಡಾ ವಲ್ಮೀಕದೆಡೆಗೆ” ಎಂದು ತೋರಿಸುತ್ತಾನೆ.

ವಲ್ಮೀಕ ಎಂದೊಡನೆ ವಾಲ್ಮೀಕಿಯ ಆಶ್ರಮದಲ್ಲಿರುವ ಸೀತೆಯನ್ನು ಸ್ಮರಿಸಿಕೊಂಡ ರಾಮ ಬ್ರಾಹ್ಮಣನ ಚುಚ್ಚು ಮಾತಿನಿಂದ ನೊಂದುಕೊಳ್ಳುತ್ತಾನೆ. ಹುತ್ತದೆಡೆಗೆ ನೋಡುತ್ತಾ ಬಿಲ್ಲನ್ನು ಅಣಿ ಮಾಡುವ ನೆವದಿಂದ ಮಹರ್ಷಿಗೆ ಕೈಜೋಡಿಸಿದ ರಾಮನನ್ನು ಕಂಡು ಬೆಚ್ಚಿದ ಬ್ರಾಹ್ಮಣನಿಗೆ ರಾಜನೂ ಶೂದ್ರನಿಗೆ ಕೈಮುಗಿಯುವುದು ಜಿಜ್ಞಾಸೆಗೀಡು ಮಾಡುತ್ತದೆ. ಮುಂದೆ ರಾಮ ಬಳಸುವ ಭೂಸುರೋತ್ತಮ, ಪೂಜ್ಯರ್, ದ್ವಿಜೇಂದ್ರ, ಮುನಿವರ್ಯ, ಸತ್ತ್ವಶೀಲ ಎಂಬೆಲ್ಲವುಗಳಲ್ಲೂ ವ್ಯಂಗ್ಯವೇ ರಾರಾಜಿಸಿದೆ. ಈ ಎಲ್ಲಾ ವಿಶೇಷಣಗಳಿಗೂ ತದ್ವಿರುದ್ಧವಾಗಿ ತನ್ನ ವರ್ತನೆ ಇದೆ ಎಂದು ಅರ್ಥವಾಗದಷ್ಟು ಮೂಢತೆಯಲ್ಲಿದ್ದಾನೆ ಬ್ರಾಹ್ಮಣ. ಆತ ಬಳಸುವ ರಾಜೇಂದ್ರ, ರಾಘವೇಂದ್ರ, ಧರ್ಮಮೂರ್ತಿ ಇವೆಲ್ಲವೂ ರಾಜನಾಗಿ ತಪ್ಪಿತಸ್ಥರನ್ನು ಶಿಕ್ಷಿಸುವ ರಘುಕುಲದಲ್ಲಿ ಹುಟ್ಟಿದ ಮತ್ತು ಧರ್ಮರಕ್ಷಕನಾದ ರಾಮನನ್ನು ನಿರ್ದೇಶಿಸುತ್ತವೆ. 'ತಪವೂ ತಪಸ್ವಿಯೂ ಪೂಜ್ಯವಾಗಿರುವಾಗ ತಪಸ್ವಿಯ ಹನನ ಪಾಪಕರವಲ್ಲವೆ' ಎಂಬ ರಾಮನ ಪ್ರಶ್ನೆಗೆ “ನಿಸ್ಸಂಶಯವಾಗಿಯೂ ವಾಲಿಸಂಹಾರಿ” ಎನ್ನುವಲ್ಲಿ ಧರ್ಮದ ನೆಪವೊಡ್ಡಿ ವಾಲಿಯನ್ನು ಮರೆಯಿಂದ ಕೊಂದವನಿಗೆ ಶಂಬೂಕವಧೆ ಕಷ್ಟವಲ್ಲ ಎಂಬುದನ್ನು ಧ್ವನಿಸುತ್ತದೆ. ಅಂತೆಯೇ ಈ ತಪಸ್ವಿಯನ್ನು ಕೊಲ್ಲುವುದು ಪಾಪವಾಗುವುದಿಲ್ಲವೇ ಎಂಬ ರಾಮನ ಮಾತಿಗೆ ಬ್ರಾಹ್ಮಣ ರಾಮನನ್ನು ವಸಿಷ್ಠ ಶಿಷ್ಯ ಎನ್ನುತ್ತ, ಬ್ರಹ್ಮರ್ಷಿಯಾದ ವಸಿಷ್ಠನ ಶಿಷ್ಯ ರಾಮನಿಗೆ, ಶಾಸ್ತ್ರವಿದ್ಯಾ ಪಾರಂಗತ ರಾಮನಿಗೆ ವರ್ಣವ್ಯವಸ್ಥೆ ತಿಳಿಯದೆ ಎಂಬ ಭಾವವಿದೆ. ತಿಳಿಯದಿದ್ದರೆ ಮತ್ತೊಮ್ಮೆ ಹೇಳುತ್ತೇನೆ ಕೇಳು ಎಂಬಂತೆ ವರ್ಣಗಳ ಕುರಿತು ಪುಟ್ಟ ಭಾಷಣವನ್ನೇ ಮಾಡುತ್ತಾನೆ. ವರ್ಣಾಶ್ರಮಧರ್ಮ ಪಾಲನೆ ಮಾಡುವುದು ಕ್ಷತ್ರಿಯನಾದ ರಾಜನ ಕರ್ತವ್ಯ ಎಂಬುದು ಬ್ರಾಹ್ಮಣನ ಇಂಗಿತವಾದರೆ

ನಿರಪರಾಧಿಯನ್ನು ಕೊಲ್ಲಲು ಹೇಳುವ ಗುರುವಿನ ವಿದ್ಯೆ ನಿರರ್ಥಕ ಎಂಬುದನ್ನು ರಾಮ 'ಆಚಾರ್ಯ' ಎಂದು ಸಂಬೋಧಿಸುವಲ್ಲಿ ತೋರಿಸಿದ್ದಾನೆ. ಬ್ರಾಹ್ಮಣನು ಬಳಸುವ ಧನುರ್ಧರ, ಅರಿಂದಮ, ಕೋದಂಡಪಾಣಿ ಎಂಬ ಸಮಾಸಪದಗಳಲ್ಲಿ ಬಿಲ್ಲು ಹಿಡಿದು ನಿಂತವನು ಬಾಣ ಪ್ರಯೋಗ ಮಾಡದಿದ್ದರೆ ಬಿಲ್ಲು ಹಿಡಿದೂ ವ್ಯರ್ಥ ಎಂಬುದು ಹಿನ್ನೆಲೆಯಲ್ಲಿದೆ. ಶತ್ರುದಮನ ಮಾಡುವ ರಾಮನಿಗೆ ಸೀತಾಪಹರಣದ ಅಪರಾಧ ಮಾಡಿದ ಆ ರಾವಣನೂ, ತಪಗೈಯುತ್ತಿರುವ ಈ ಶೂದ್ರನೂ ಪಾಪಕರ್ಮದಲ್ಲಿ ಸಮನಾಗಿರುವುದರಿಂದ ರಾವಣ ಸಂಹಾರ ಮಾಡಿದ ಬ್ರಹ್ಮಾಸ್ತ್ರವೇ ಶೂದ್ರನನ್ನೂ ಕೂಡ ಸಂಹರಿಸಲಿ ಎಂದು ಉತ್ತೇಜಿಸುತ್ತಾನೆ. ಅತಿಭಯಂಕರವಾದ ಬ್ರಹ್ಮಾಸ್ತ್ರವು ತನ್ನ ಶತ್ರುವನ್ನು ಅರಿಯದೆ ಬಿಡದು ಎಂದು ತಿಳಿ ಹೇಳಹೋದ ರಾಮನಿಗೆ ಆ ಪಾಪಿಗೆ ಅದೇ ತಕ್ಕುದೆಂದೂ ಅದನ್ನೇ ಪ್ರಯೋಗಿಸೆಂದೂ ಅವಸರಿಸುತ್ತಾನೆ. ಬತ್ತಳಿಕೆಗೆ ರಾಮ ಕೈಯಿಟ್ಟ ತಕ್ಷಣವೇ ಭೂಮ್ಯಾಕಾಶಗಳು ನಡುಗಿ ಗುಡುಗುತ್ತವೆ. ಬ್ರಾಹ್ಮಣ ಹೆದರಿ ರಾಮನ ಮರೆಗೆ ಸರಿಯುತ್ತಾನೆ.

ಇದುವರೆಗೆ ಮೌನವಾಗಿ ನಿಂತು ಎಲ್ಲವನ್ನೂ ನೋಡುತ್ತಿದ್ದ ಮೃತ್ಯು ಬೆಪ್ಪಾಗಿ 'ತಾಳು ಪ್ರಭೂ ಋತ' ಎಂದು ಕೂಗುತ್ತದೆ. ಸೃಷ್ಟಿ ಸ್ಥಿತಿ ಲಯಗಳಿಗನುಸಾರವಾಗಿ ವಿಶ್ವ ನಿಯಂತ್ರಕವಾಗಿರುವ ಋತನಿಯಮವನ್ನು ವಿಶ್ವಸ್ಥಿತಿ ರಕ್ಷಕನಾದ ರಾಮನೇ ಉಲ್ಲಂಘಿಸಿ ಶಂಬೂಕವಿನಾಶಕ್ಕೆ ಅಣಿಯಾದಾಗ ಧರ್ಮದೇವತೆಯ ಆಜ್ಞಾನುಸಾರ ತಪಸ್ವಿಯ ಉಸಿರಿಗೆ ಕಾವಲಾಗಿರುವ ಮೃತ್ಯುವು ತನ್ನ ಕರ್ತವ್ಯಕ್ಕೆ ಅಡ್ಡಿಮಾಡಿದ ಅವನಿಗೆ ಅರಿವಿನ ದಾರಿ ತೋರಿಸಲು ಕೋರುತ್ತದೆ. ರಾಮನು ಕರ್ತವ್ಯವನ್ನು ಮೀರಲಾಗದು, ಎಂದು ಅಖಿಲರ್ಗಳಲ್ಲಿ ಒಬ್ಬನಾಗಿರುವ ತಾನೂ ಕೂಡ ಕರ್ತವ್ಯದ ಪರಿಧಿಯಲ್ಲೇ ಇದ್ದಾನೆಂಬುದನ್ನು ಸೂಚಿಸುತ್ತಾನೆ. ತಾನು ಸೆಳೆಯಲಿರುವ ಈ ಮಹಾಸ್ತ್ರ ಮಾರ್ಗದರ್ಶಿ ಎನ್ನುತ್ತಾನೆ. ಅಂದರೆ ಬ್ರಹ್ಮಾಸ್ತ್ರವನ್ನು ಪ್ರಯೋಗಿಸುವುದು ತನ್ನ ಕರ್ತವ್ಯ, ಉಳಿದಂತೆ ತಾನೂ ಅದರ ಅನುಸಾರಿಯೆಂದೂ ಮೃತ್ಯುವೂ ಕೂಡ ಹಾಗೇ ಮಾಡಬೇಕೆಂಬುದು ಅದರರ್ಥ. ಶ್ರೀರಾಮನು ಬ್ರಹ್ಮಾಸ್ತ್ರವನ್ನು ತೊಟ್ಟು ಶತ್ರುವನ್ನು ಹುಡುಕಿ ಕೊಲ್ಲು ಎಂದು ಸಾರಿಹೇಳಿ ಬಿಡುತ್ತಾನೆ. ಸಿಡಿಲು ಮಿಂಚುಗಳೊಡನೆ ಹೊರಡುವ ಆ ಮಹಾಸ್ತ್ರವು ಶಂಬೂಕ ಋಷಿಯ ಬಳಿಬಂದು ವಿನೀತವಾಗಿ ಪ್ರದಕ್ಷಿಣೆ ಹಾಕಿ ನಮಸ್ಕಾರ ಮಾಡುತ್ತದೆ. ಮೃತ್ಯುವೂ ಅದನ್ನು ಅನುಸರಿಸುತ್ತದೆ. ಭಯಾಶ್ಚರ್ಯಗಳಿಂದ ನೋಡುತ್ತಿರುವ ಬ್ರಾಹ್ಮಣನಿಗೆ ಇದೇನು ಆಚಾರ್ಯ ಎಂದು ಗೊತ್ತಿರುವ ಉತ್ತರಕ್ಕೇ ಪ್ರಶ್ನೆ ಸೃಷ್ಟಿಸುವ ರಾಮನಿಗೆ ನಿಜವಾಗಿಯೂ ಇದೆಲ್ಲವೂ ಶೂದ್ರನ ತಪಃ ಪ್ರಭಾವವೇ ಎಂದು ಅಚ್ಚರಿಪಡುವ ಬ್ರಾಹ್ಮಣ ರಾಮಬಾಣದ ಕುರಿತು ಶಂಕೆ ವ್ಯಕ್ತಪಡಿಸುತ್ತಾನೆ. ರಾಮನು ಬ್ರಹ್ಮಾಸ್ತ್ರವು ನಿಷ್ಫಲವಾಗುವುದಿಲ್ಲ ಎಂದು ಹಗೆ, ಅಧರ್ಮಿ, ಬ್ರಾಹ್ಮಣವರೇಣ್ಯ, ಪೂಜ್ಯರನ್ನು ಅವಜ್ಞೆಗೆಯ್ದಾತ, ಶಾಸ್ತ್ರ ಸಂಭ್ರಾಂತ, ದುರ್ವಿನೀತ ಎಂದೆಲ್ಲ ಅವನನ್ನು ಜರಿದು ಧರ್ಮದ ಹಗೆಯನ್ನು ಕೊಲ್ಲುವಲ್ಲಿ ಬ್ರಹ್ಮಾಸ್ತ್ರವು ಸಫಲವಾಗಿಯೇ ತೀರುತ್ತದೆ ಎಂದು ಸಾರುತ್ತಾನೆ. ತಾನೇ ಧರ್ಮದ ಶತ್ರು ಎಂದು ಅರಿವಾದ ಮೇಲೆ ಬ್ರಾಹ್ಮಣನು ಅನಾಥರಕ್ಷಕಾ ದೀನಬಂಧೂ ಕ್ಷಮಾ ಕನ್ಯಾ ಜೀವಿತೇಶ್ವರ ಅಂದರೆ ಕ್ಷಮಯಾಧರಿತ್ರಿ

ಭೂತಾಯಿಯ ಮಗಳ ಪತಿಯೇ ನನಗೆ ದಾರಿತೋರು ಎಂದು ರಾಮನ ಮೊರೆಹೋದಾಗ ರಾಮನು "ನೀನು ಅವಜ್ಞೆ ಮಾಡಿದವರನ್ನೇ ಮೊರೆಹೋಗು, ಮಾರ್ಗದರ್ಶಿಯಾದ ಈ ಮಹಾಸ್ತ್ರವನ್ನು ಅನುಸರಿಸು" ಎಂಬುದು ಅವನನ್ನು ಚುಚ್ಚಿದಂತಿದೆ. ತಾನೇ ಪ್ರಯೋಗಿಸಹೇಳಿದ ಸಾಯಕದಿಂದ ತಾನೇ ಬುದ್ಧಿ ಕಲಿಯಬೇಕಾದ ವಿಪರ್ಯಾಸ ಬ್ರಾಹ್ಮಣನದಾಗಿದೆ. ರಾಮನಿಗೆ ಕ್ಷತ್ರಿಯೋತ್ತಮ ಎನ್ನುವ ಬ್ರಾಹ್ಮಣನಿಗೆ ರಾಜತ್ವದ ಭಯವೂ ಕಾಡುತ್ತಿದೆ. ಆದ್ದರಿಂದ ಮಹಾಸ್ತ್ರವನ್ನು ಅನುಸರಿಸಲು ಅರೆಮನಸ್ಸಿನಿಂದ ಒಪ್ಪಿದರೂ ಅದು ಶಾಸ್ತ್ರಸಮ್ಮತವಲ್ಲ ಎಂದು ಅಳುಕಿನಿಂದ ಹೇಳುವಾತನಿಗೆ ರಾಮನು "ಶುದ್ಧಮನಸ್ಸಿನ ಸತ್ಕಾರ್ಯಕ್ಕೆ ಶಾಸ್ತ್ರದ ಸಹಾಯವೇಕೆ? ಧರ್ಮವು ಶಾಸ್ತ್ರಗಳಿಂದ ಆಶ್ರಿತವಾಗಿಲ್ಲ, ಯುಕ್ತಿಹೀನವಾದ ಅವಿವೇಕದ ನಿರ್ಧಾರಗಳು ಧರ್ಮೋಲ್ಲಂಘನೆಯಾಗುತ್ತವೆ" ಎಂದು ವಿಶದಪಡಿಸುತ್ತಾನೆ.

ತುಸು ಹೊತ್ತು ರಾಮನನ್ನೇ ದಿಟ್ಟಿಸುತ್ತ ವಿವೇಚಿಸಿದ ಬ್ರಾಹ್ಮಣನಿಗೆ, ತಾನೇ ತನ್ನ ದೂರಿನಿಂದ ರಾಮನನ್ನು ಪ್ರೇರೇಪಿಸಿ ತನ್ನ ಪ್ರಕಾರ ಅಪರಾಧಿಯಾದ ಶಂಬೂಕನನ್ನು ಕೊಲ್ಲಿಸ ಹೊರಟರೂ ರಾಮನ ಬಾಣದ ಪ್ರಕಾರ ಶಂಬೂಕನು ನಿರಪರಾಧಿ ಎಂದೂ, ಫಿರ್ಯಾದು ಕೊಟ್ಟವನೇ ಅಪರಾಧಿ ಎಂದೂ ಸಾಬೀತಾಗಿದೆ ಅಂದು ಅರಿವಾಗುತ್ತದೆ. ಧರ್ಮದ ಶತ್ರು ಶೂದ್ರ ತಾಪಸನಲ್ಲದೆ, ನಮಸ್ಕರಿಸುವುದನ್ನು ತಿರಸ್ಕರಿಸಿ ಧರ್ಮರಕ್ಷಕನೆಂದು ಬೀಗಿದ ತಾನೇ ಎಂಬ ನಿಜ ಬೋಧೆಯಾಗುತ್ತದೆ. "ಆರಾದರೇನ್?, ಆರಾಧ್ಯರ್ತಪೋಧನರ್! ನಮಸ್ಕಾರಮೆ ಪುಣ್ಯಂ; ತಿರಸ್ಕಾರಮೆ ಪಾಪಂ!" ಎಂದು ಉದ್ಗರಿಸುತ್ತಾನೆ. ಅದನ್ನೇ ಕಾಯುತ್ತಿರುವನಂತಿದ್ದ ರಾಮನು "ಆರಾಧ್ಯರಾದ ತಪೋಧನರಿಗೆ ಏನು ಮಾಡಿದರೆ ಪುಣ್ಯವೆಂದರಿಯುವಿರಿ ಈಗ" ಎನ್ನುತ್ತ ಏನು ಮಾಡಬೇಕೆಂಬುದನ್ನು ಬ್ರಾಹ್ಮಣನಿಗೇ ಬಿಡುತ್ತಾನೆ. ಪರವಶಗೊಂಡವನಂತೆ ನಡೆದು ಬ್ರಾಹ್ಮಣನು ಮಹರ್ಷಿಗೆ ಸಾಷ್ಟಾಂಗ ನಮಸ್ಕಾರ ಮಾಡುತ್ತಾನೆ. ತಕ್ಷಣವೇ ಪ್ರಕೃತಿಯು ಸಂತಸಗೊಳ್ಳುತ್ತದೆ, ಮೃತ್ಯು ಕಣ್ಮರೆಯಾಗಿ ಮಗು ಜೀವಂತವಾಗುತ್ತದೆ. ಜ್ಞಾನೋದಯ ಹೊಂದಿದ ಬ್ರಾಹ್ಮಣ ತನ್ನ ಶಾಸ್ತ್ರಮೂಢತೆಯನ್ನು, ವರ್ಣಗರ್ವಾಂಧತೆಯ ಕಾಳಿಕೆಯನ್ನು ಕಳೆದುಕೊಂಡು ಮರುಹುಟ್ಟು ಪಡೆದು ಹೊಸ ತೇಜಸ್ಸಿನಿಂದ ಹೊಳೆಯುತ್ತಾನೆ. ದೇವತೆಯಂತೆ ಹೊಳೆಯುವ ಈ ಶಕ್ತಿಸ್ವರೂಪ ಯಾರು ಎಂದು ರಾಮನನ್ನು ಕುರಿತು ಮಗು ಕೇಳಿದ ಪ್ರಶ್ನೆಗೆ ತಮ್ಮಿಬ್ಬರನ್ನೂ ಕಾಪಾಡಿದ ರಾಜರಾಜೇಂದ್ರನಾದ ಶ್ರೀರಾಮಚಂದ್ರ ಎಂದು ಕೈಮುಗಿಸುತ್ತಾನೆ. ರಾಮನು ನಿಜವಾಗಿಯೂ ದ್ವಿಜನಾದ ಕುಮಾರನಿಗೆ ಶಂಬೂಕ ಋಷಿಯನ್ನು ತೋರಿಸಿ ಪ್ರಣಾಮ ಮಾಡಿಸುತ್ತಾನೆ. ತಪಂ ತಾನಿರ್ಪೆಡೆಯೊಳೆ ದೂರಕರ್ಮಿ ಎಂಬಂತೆ ಮಹರ್ಷಿಯು ತಾನಿದ್ದ ಕಡೆಯಿಂದಲೇ ಆಶೀರ್ವಾದ ಮಾಡುವುದರೊಂದಿಗೆ ನಾಟಕ ಮುಗಿಯುತ್ತದೆ.

ರೌದ್ರತೆಯಿಂದ ರಮ್ಯತೆಯೆಡೆಗೆ ಹರಿಯುವ ಈ ಕೃತಿ ಮಾನವಕೃತ ಧರ್ಮದ ಕಲ್ಪನೆಯ ಅಮಾನುಷತೆಗೂ, ದೈವಕೃತ ಧರ್ಮದ ಸರ್ವಸಮಾನತೆಗೂ ಇರುವ ಬೃಹದಂತರದ ನಿರೂಪಣೆಯಾಗಿದೆ. ಸರ್ವೋದಯ ಸಮನ್ವಯ ಪೂರ್ಣದೃಷ್ಟಿ

ಮನುಜಮತ ವಿಶ್ವಪಥಗಳ ಮಾನವ ಕೇಂದ್ರಿತವಾದ ವಿಶ್ವಮಾನವತೆಯ ಪ್ರತಿಪಾದನೆಯೇ ಈ ಕೃತಿ. ಧರ್ಮಾಧರ್ಮವಿವೇಕರಹಿತ ನಡೆಗಳನ್ನು ತಿದ್ದುವ ಮತ್ತು ವಿವೇಚಿಸಿ ತಂತಾನೆ ಅರಿತುಕೊಳ್ಳಲು ಸ್ಫೂರ್ತಿನೀಡುವ ಈ ನಾಟಕದ ಮೂಲ ಉದ್ದೇಶ ವಿಶ್ವಮಾನವತೆಯನ್ನು ಸಾರುವುದೇ ಆಗಿದೆ. ವೃಕ್ಷಭೈರವನ ರೂಪದಲ್ಲಿ ಪ್ರಕೃತಿಯೂ ಒಳಗೊಂಡಂತೆ, ಧರ್ಮದೇವತೆ, ಮೃತ್ಯುದೇವತೆಯರೂ ಕೂಡ ಧರ್ಮವನ್ನು ಕಾಯುವಾಗ ಅದರ ವಿನಾಶ ಅಸಾಧ್ಯ ಎಂಬ ಸಂದೇಶವನ್ನು ವಿಶ್ವಕ್ಕೆ ಸಾರಿದೆ. ಅಲ್ಪಮಾನವನನ್ನು ವಿಶ್ವಮಾನವನಾಗಿ ಮಾರ್ಪಡಿಸುವಲ್ಲಿ ಮತ್ತು ಅವನ ಬದುಕನ್ನು ಸಹ್ಯ ಸಾರ್ಥಕ ಸುಂದರವಾಗಿಸುವಲ್ಲಿ ಈ ನಾಟಕದ ವಸ್ತು ಶ್ರಮಿಸಿ ಯಶಸ್ವಿಯೂ ಆಗಿದೆ.

**ಪರಾಮರ್ಶನ ಗ್ರಂಥಗಳು:**

1. ಕುವೆಂಪು, (2004), ಕುವೆಂಪು ಸಮಗ್ರ ಗದ್ಯ ಸಂಪುಟ–2, ಹಂಪಿ: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.
2. ಬಸವರಾಜ ಡೋಣೂರ, (2010), ಒಳಗಣ ಹೊರಗಣ, ಧಾರವಾಡ: ನೀಲಪರ್ವತ ಪ್ರಕಾಶನ.